# ಗೋ ರಕ್ಷಣೆ ಕರಡು ವಿಧೇಯಕ ಸಿದ್ಧ



ನಗರದಲ್ಲಿ ಗೃಹ ಸಚಿವ ವಿ.ಎಸ್.ಆಚಾರ್ಯ ಅವರನ್ನು ಶುಕ್ರವಾರ ಭೇಟಿ ಮಾಡಿದ ಸರ್ವಜ್ಞನಗರ ಹಾಗೂ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ಸಾರ್ವಜನಿಕ ನಿಯೋಗವೊಂದು ಗೋ ಹತ್ಯೆ ಮತ್ತು ಮತಾಂತರ ನಿಷೇಧ ಕಾನೂನು ಜಾರಿಗೊಳಿಸುವ ಸಂಬಂಧ 30 ಸಾವಿರ ಸಹಿ ಸಂಗ್ರಹಿಸಿದ ಪತ್ರವನ್ನು ಸಲ್ಲಿಸಿತು.

**ವಿಕ ಸುದ್ದಿಲೋಕ**

**ಬೆಂಗಳೂರು:** ಗೋ ಸಂರಕ್ಷಣೆ ನಿಟ್ಟಿನಲ್ಲಿ ಕರಡು ವಿಧೇಯಕವನ್ನು ತಯಾರಿಸಲಾಗಿದ್ದು ಶೀಘ್ರದಲ್ಲೇ ಅದರ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ವಿ.ಎಸ್.ಆಚಾರ್ಯ ಭರವಸೆ ನೀಡಿದರು.

ರಾಜ್ಯದಲ್ಲಿ ಸಂಪೂರ್ಣ ಗೋ ಹತ್ಯೆ ಮತ್ತು ಮತಾಂತರ ನಿಷೇಧ ಕಾನೂನು ಜಾರಿಗೊಳಿಸುವ ಸಂಬಂಧ ಸರ್ವಜ್ಞನಗರ ಹಾಗೂ ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರದ ಸಾರ್ವಜನಿಕ ನಿಯೋಗವೊಂದು 30 ಸಾವಿರ ಸಹಿ ಸಂಗ್ರಹಿಸಿದ ಪತ್ರವನ್ನು ಶುಕ್ರವಾರ ಸಲ್ಲಿಸಿದ ಸಂದರ್ಭದಲ್ಲಿ ಈ ರೀತಿ ಉತ್ತರಿಸಿದರು.

ನಿಯೋಗದ ಮುಖಂಡ ಡಾ.ರಾಜಾರಾಮ್ ಪ್ರಸಾದ್ ಮಾತನಾಡಿ, ಗೋ ಹತ್ಯೆ ನಿಷೇಧದ ಜತೆಗೆ ಪ್ರವಾಹ ಪೀಡಿತ ಪ್ರದೇಶಗಳ ಹೊಲ, ತೋಟಗಳಿಗೆ ಸಗಣಿ ಹಾಗೂ ಗೋ ಮೂತ್ರ ಬಳಸಿ ತಯಾರಿಸಲಾದ 'ಜೀವಾಮೃತ' ಸಿಂಪಡಿಸುವ ಮೂಲಕ ಕೃಷಿಭೂಮಿಗೆ ಮರು ಚೈತನ್ಯ ನೀಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮಾರಪ್ಪ ಅಲಸೂರು, ತಿಮ್ಮೇಗೌಡ, ಗೋವಿಂದರಾಜ್, ಕಮಲಾ, ಮುನಿರಾಜು, ವರ್ಧಮಾನ ಜೈನ್, ಮುನಿರಾಜ್ ಕಾರ್ಣಿಕ್ ಮತ್ತಿತರರು ಜತೆಯಲ್ಲಿದ್ದರು.



# ನೆರೆ: ಕೃಷಿ ಭೂಮಿಗೆ 'ಜೀವಾಮೃತ' ಬಳಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಂಶ ಸಂರಕ್ಷಣೆಗಾಗಿ ಗೋಹತ್ಯೆ ನಿಷೇಧದ ಜೊತೆಗೆ ಕರ್ನಾಟಕದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಹೊಲ, ತೋಟಗಳಿಗೆ ಗೋವುಗಳ ಸೆಗಣಿ ಹಾಗೂ ಗೋಮೂತ್ರ ಬಳಸಿ ತಯಾರಿಸಲಾದ 'ಜೀವಾಮೃತ' ಸಿಂಪಡಿಸುವ ಮೂಲಕ ನೆರೆಯಿಂದಾಗಿ ಹಾಳು ಬಿದ್ದಿರುವ ಕೃಷಿಭೂಮಿಗೆ ಮರುಚೈತನ್ಯ ನೀಡಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರಿನ ನಾಗರಿಕರ ನಿಯೋಗವು ಶುಕ್ರವಾರ ಸರ್ಕಾರವನ್ನು ಒತ್ತಾಯಿಸಿತು.



ಗೋವಂಶ ಹತ್ಯೆಯ ನಿಷೇಧ ಹಾಗೂ ನೆರೆ ಪೀಡಿತ ಪ್ರದೇಶಗಳಲ್ಲಿ ಗೋ ಆಧಾರಿತ ಕೃಷಿಗೆ ಒತ್ತು ಕೊಡುವ ಮೂಲಕ ನೆರೆ ಪೀಡಿತ ಪ್ರದೇಶಗಳಲ್ಲಿ ಭೂಮಿಗೆ ಮರುಚೈತನ್ಯ ನೀಡುವಂತೆ ಮನವಿ ಮಾಡಿ ಸರ್ವಜ್ಞ ನಗರ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ನಾಗರಿಕರ ನಿಯೋಗವು ಶುಕ್ರವಾರ ಗೃಹ ಸಚಿವ ವಿ.ಎಸ್. ಆಚಾರ್ಯ ಅವರಿಗೆ ಮನವಿ ಸಲ್ಲಿಸಿತು. ಡಾ. ರಾಜಾರಾಮ್ ಪ್ರಸಾದ್, ಮಾರಪ್ಪ ಅಲಸೂರು, ತಿಮ್ಮೇಗೌಡ, ಗೋವಿಂದರಾವ್, ಕಮಲಾ, ಮುನಿರಾಜು, ಮುನಿರಾಜ್ ಕಾರ್ಣಿಕ್, ವರ್ಧಮಾನ ಜೈನ್ ಮತ್ತಿತರ ಪ್ರಮುಖರು ನಿಯೋಗದಲ್ಲಿದ್ದರು.

ಸರ್ವಜ್ಞ ನಗರ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರಗಳ ಸುಮಾರು 30 ಸಹಸ್ರ ಜನರ ಸಹಿಗಳನ್ನು ಒಳಗೊಂಡ ಮನವಿ ಪತ್ರವನ್ನು ಸಾರ್ವಜನಿಕ ನಿಯೋಗವು ಗೃಹ ಸಚಿವ ಡಾ.ವಿ.ಎಸ್.ಆಚಾರ್ಯ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿತು. ಮಾರಪ್ಪ ಅಲಸೂರು, ತಿಮ್ಮೇಗೌಡ, ಗೋವಿಂದರಾವ್, ಡಾ. ರಾಜಾರಾಮ್ ಪ್ರಸಾದ್, ಕಮಲಾ, ಮುನಿರಾಜು, ವರ್ಧಮಾನ ಜೈನ್, ಮುನಿರಾಜ್ ಕಾರ್ಣಿಕ್ ಮತ್ತಿತರ ಪ್ರಮುಖರು ನಿಯೋಗದಲ್ಲಿದ್ದರು.

ಗೋ ಆಧಾರಿತ ಕೃಷಿಗೆ ಒತ್ತು ನೀಡಿ ಭೂಮಿಗೆ ಜೀವಾಮೃತ ಉಣಿಸುವುದರಿಂದ, ನೀರು ನಿಂತು ಸವುಳಾಗಿರುವ ಭೂಮಿಯನ್ನು ಮತ್ತೆ ಫಲವತ್ತಾಗಿಸಿ ಮುಂದಿನ ವ್ಯವಸಾಯದ ವೇಳೆಗೆ ಭೂಮಿಯಲ್ಲಿ ಉತ್ತಮ ಬೆಳೆ ಪಡೆಯಲು ರೈತರಿಗೆ ನೆರವಾಗಬಹುದು ಎಂದು ಮನವಿ ಪತ್ರದಲ್ಲಿ ವಿವರಿಸಲಾಗಿದೆ.

ಮನವಿ ಸ್ವೀಕರಿಸಿದ ಗೃಹ ಸಚಿವರು, ಗೋ ಸಂರಕ್ಷಣೆಗೆ ಕರಡು ಮಸೂದೆಯನ್ನು ತಯಾರಿಸಲಾಗಿದ್ದು ಶೀಘ್ರದಲ್ಲೇ ಅದರ ಜಾರಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.